<u>4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>

ಸಿಸಿ ನಂ- 105~2013 ಅ.ಸಾ.-1

ಪ್ರ.ವ.ಬೊ. ದಿಃ 06.03.2020

ಸಾಕ್ಷಿದಾರನ ಹೆಸರು : ಕೆ.ಎಂ.ರಾಜಣ್ಣ

ತಂದೆಯ ಹೆಸರು : ಮಣ್ಣಪ್ಪ

ವಯಸ್ಸು : 58 ವರ್ಷ

ಕೆಲಸ : ಎಎಸ್‌ಐ, ಪೀಣ್ಯ ಪೊಲೀಸ್ ಠಾಣೆ

ವಾಸ : ಬೆಂಗಳೂರು

<u>ಕಲಂ 299 ರ ಅಡಿಯಲ್ಲಿ ಸಾಕ್ಷ್ಯಃ</u>
<u>ಮುಖ್ಯ ವಿಚಾರಣೆ ಹಿ.ಸಾ.ಸ.ಅ ರವರಿಂದಃ</u>

2016 ರಿಂದ ಪೀಣ್ಯ ಪೊಲೀಸ್ ಠಾಣೆಯಲ್ಲಿ ಎಎಸ್‌ಐ ಕರ್ತವ್ಯದಲ್ಲಿದ್ದೇನೆ. ಸದರಿ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಉದ್ಘೋಷಣಾ ಆದೇಶವನ್ನು ಹೊರಡಿಸಿತ್ತು ಅದರಂತೆ ನಾನು ದಿಃ 05.11.2017 ರಂದು ಪೀಣ್ಯ ಕೈಗಾರಿಕಾ ಪ್ರದೇಶ ಎಲೆಕ್ಟ್ರಿಕ್ಸ್ ಇಂಡಿಯಾ ಲಿ. ಹತ್ತಿರ ಹೋಗಿ ಆರೋಪಿ ಇರುವಿಕೆ ಬಗ್ಗೆ ವಿಚಾರಿಸಿದ್ದೇನೆ. ಈ ಸಂಬಂಧವಾಗಿ ಸ್ಥಳದಲ್ಲಿ ವೆಂಕಟೇಶ್ ಮತ್ತು ನಂಜುಂಡಯ್ಯ ಪಂಚರ ಸಮಕ್ಷಮ ಒಂದು ಮಹಜರ್ ಬರೆದಿದ್ದೇನೆ. ಮಹಜರ್ ನಿ.ಪಿ.1 ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಆಮೇಲೆ ಈ ಬಗ್ಗೆ ಉದ್ಘೋಷಣಾ ಪ್ರತಿಯನ್ನು ಕಾಂಪೌಂಡ್ ಇತ್ಯಾದಿ ಕಡೆ ಚಿಟಕಾಯಿಸಿದ್ದೇನೆ. ಡಂಗೂರದ ಮೂಲಕ ಪ್ರಚಾರ ಪಡಿಸಿ ಆರೋಪಿ ಇರುವಿಕೆ ಬಗ್ಗೆ ಮಾಹಿತಿ ಸಿಕ್ಕಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಗೆ ಹಾಗೂ ನ್ಯಾಯಾಲಯಕ್ಕೆ ತಿಳಿಸುವಂತೆ ಸಾರ್ವಜನಿಕರಲ್ಲಿ ಕೇಳಿಕೊಂಡಿದ್ದೇನೆ. ಆರೋಪಿಗೆ ಸಂಬಂಧಪಟ್ಟ ಸ್ಥಳೀಯರನ್ನು ಹಾಗೂ ಕಂದಾಯ ಅಧಿಕಾರಿಗಳನ್ನು ಮಾಹಿತಿ ಕೋರಿದ್ದೇನೆ. ಮನವಿಯನ್ನು ನಿ.ಪಿ.2 ಎಂದು ಗುರುತಿಸಲಾಯಿತು. ನಂತರ ಮಾನ್ಯ ನ್ಯಾಯಾಲಯಕ್ಕೆ ಕೋರಿಕೆ ಪತ್ರದೊಂದಿಗೆ ನಿವೇದಿಸಿಕೊಂಡಿದ್ದೇನೆ. ಕೋರಿಕೆ ಪ್ರತಿಯನ್ನು ನಿ.ಪಿ.3 ಎಂದು ಗುರುತಿಸಲಾಯಿತು.

ಆರೋಪಿ ಪರಾರಿಯಾಗಿದ್ದಾನೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು